ಕಥೆ




ಬಿ.ಎನ್. ಮಲ್ಲೇಶ್

ಕಲೆ: ಆದಿಸ್ವರೂಪ


# ಹುಸೇನವ್ವನ ವಕ್ಫ್



ಸೂರ್ಯ ಪರಮಾತುಮನ ತೇರು ಹೊಂಡಾಕೆ ಇನ್ನೂ ತಾಸರ್ಧತಾಸು ಇದ್ದಿರಬೇಕು. ಹಕ್ಕಿ ಪಕ್ಷಿ ಆಗ್ಲೇ ಕಿಚಿಪಿಚಿ ಕಿಚಿಪಿಚಿ ಶುರು ಮಾಡಿದ್ದವು. ಮನಿ ಹೊರಗೆ ಜಗುಲಿ ಮ್ಯಾಲ ಕುಂತು ಯಾರೋ ಕೆಂವ್ ಕೆಂವ್ ಕೆಮ್ಮಿದಾಂಗ ಕೇಳ್ಸಿ ಒಳಗೆ ಮಲಗಿದ್ದ ಗಂಗವ್ವಗೆ ತುಸ ಎಚ್ಚರಾತು. ಈಟು ನಸುಕಿನ್ಯಾಗೆ ಅದೂ ನಮ್ಮನಿ ಮುಂದ ಯಾರಿದ್ದಿರಬಹುದು ಎಂದು ಯೋಚಿಸುತ್ತಲೇ ಜಗ್ಗಿ ಎಳೀತಿದ್ದ ಕಣ್ಣ ರೆಪ್ಪಿ ಅಗಲಿಸಲಾರದೆ ಮತ್ತೆ ಮಗ್ಗುಲಾದಳು.

ಸ್ವಲುಪ ಹೊತ್ತು ಬಿಟ್ಟು ಮತ್ತದೇ ಕೆಮ್ಮಿನ ಸದ್ದು... ಯಾರೋ ಹೆಣಮಗಳು ಅನ್ನಿಸಿತು ಗಂಗವ್ವಗೆ. ಪಕ್ಕ ಗೊರಕಿ ಹೊಡೀತಿದ್ದ ಯಜಮಾನಗೆ ಎಚ್ಚರಾಗದಂಗೆ ಮೆಲ್ಲಕೆ ಹಾಸಿಗಿ ಬಿಟ್ಟೆದ್ದು ಕ್ವಾಣಿ ಬಾಗಿಲ ತಗದು ಹೊರಕ್ಕೆ ಬಂದಳು. ದೊಡ್ಡ ಮುಂಬಾಗಿಲ ಅಗಣಿ ಸರಿಸಿ ಹಿಂದಕ್ಕೆ ಎಳೀತಿದ್ದಂತೆ ಜಗುಲಿಯ ಕಂಬವೊಂದಕ್ಕೆ ಆತು ಕುಂತ ಹುಸೇನವ್ವ ಕಂಡಳು. ಗಾಬರಿಗೊಂಡ ಗಂಗವ್ವ 'ಅಯ್ಯೋ ಸಿವನೆ, ಹುಸೇನವ್ವ... ಯಾಕ ಏನಾತು? ಯಾಕಿಂಗೆ ಕುಂತಿದಿ ಅದೂ ಇಲ್ಲಿ ಈ ವ್ಯಾಳೇದಾಗ? ಶೀತ ಗೀತ ಆದೀತು ನಡಿ, ಮೊದ್ಲು ಒಳಕ್ಕೆ ನಡಿ ಎನ್ನುತ್ತಾ ಕಾಳಜಿ ಮಾಡಿದಳು.

'ಅಪ್ಪನ್ನ ನೋಡ್ಬೇಕಿತ್ತು...' ಕೆಮ್ಮುತ್ತಲೇ ಕಂಬ ಹಿಡಿದು ಸಾವಕಾಶ ಮೇಲಕ್ಕೆದ್ದ ಹುಸೇನವ್ವನ ತೋಳು ಹಿಡಿದು ಗಂಗವ್ವ ಮನಿ ಒಳಕ್ಕೆ ನಡೆಸಿಕೊಂಡು ಹೋದಳು. 'ಅಪ್ಪಾರಿನ್ನು ಎದ್ದಿಲ್ಲ ಬಾ ಕೂರಿಲ್ಲಿ, ಏನಾತು, ಎಡಗಣ್ಯಾಕೆ ಬಾತುಕೊಂಡೇತಿ? ಶಫಿ ಮತ್ತೇನರೆ ಬಂದಿದ್ನೇನು...?' ಗಂಗವ್ವನ ಪ್ರಶ್ನೆಗಳಿಗೆ